ಕಾಡಾನೆ ಹಾವಳಿ ತಪ್ಪಿಸಲು ಸೋಲಾರ್ ತಂತಿ ಅಳವಡಿಕೆ ಮತ್ತು ಕಂದಕ ನಿರ್ಮಾಣ

896 (791); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಕೊಡಗು ಜಿಲ್ಲೆಯಲ್ಲಿನ ಅರಣ್ಯ ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಸೋಲಾರ್ ತಂತಿ ಅಳವಡಿಕೆ ಮತ್ತು ಕಂದಕಗಳ ನಿರ್ಮಾಣಕ್ಕೆ ಮಂಜೂರಾದ ಮೊತ್ತವೆಷ್ಟು;

ಆ) ಎಷ್ಟು ಮೊತ್ತವನ್ನು ವಿನಿಯೋಗಿಸಲಾಗಿದೆ; ಎಷ್ಟು ಬಾಕಿ ಇದೆ;

ಇ) ಯಾವ ಯಾವ ಭಾಗದಲ್ಲಿ ಎಷ್ಟು ಮೊತ್ತದಲ್ಲಿ ಕಾಮಗಾರಿ ಪೂರೈಸಲಾಗಿದೆ? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿನ ಅರಣ್ಯ ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಸೋಲಾರ್ ತಂತಿ ಅಳವಡಿಕೆ ಮತ್ತು ಕಂದಕಗಳ ನಿರ್ಮಾಣ ವಿವರ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿ ವಿವರ	ಮಂಜೂರಾದ ಮೊತ್ತ (₹ ಲಕ್ಷಗಳಲ್ಲಿ)
1	ಸೋಲಾರ್ ತಂತಿ ಬೇಲಿಗೆ	53.59
2	ಆನೆತಡೆ ಕಂದಕ ನಿರ್ಮಾಣಕ್ಕೆ	126.51
3	ಆನೆ ತಡೆ ಕಂದಕ ಮೇಲ್ದರ್ಜೆಗೇರಿಸುವುದಕ್ಕೆ	11.48
4	ವಿಶೇಷ ವಿನ್ಯಾಸ/ಸ್ಟೋನ್ ಪಿಚ್ಚಿಂಗ್ ಕಾಮಗಾರಿಗೆ	22.52

ಆ) (₹ ಲಕ್ಷ ಗಳಲ್ಲಿ)

ಕ್ರ. ಸಂ.	ಕಾಮಗಾರಿ ವಿವರ	ವಿನಿಯೋಗ	ಬಾಕಿ
1	ಸೋಲಾರ್ ತಂತಿ ಬೇಲಿಗೆ	–	53.59
2	ಆನೆತಡೆ ಕಂದಕ ನಿರ್ಮಾಣಕ್ಕೆ	6.30	120.22
3	ಆನೆ ತಡೆ ಕಂದಕ ಮೇಲ್ದರ್ಜೆಗೇರಿಸುವುದಕ್ಕೆ	–	11.48
4	ವಿಶೇಷ ವಿನ್ಯಾಸ/ಸ್ಟೋನ್ ಪಿಚ್ಚಿಂಗ್ ಕಾಮಗಾರಿಗೆ	–	22.52

ಇ) 2014–15ನೇ ಸಾಲಿಗೆ ಜನವರಿ, 2015ರ ಅಂತ್ಯಕ್ಕೆ ಈ ಕೆಳಗಿನ ಭಾಗಗಳಲ್ಲಿ ಕಾಮಗಾರಿ ಪೂರೈಸಲಾಗಿದೆ.

(₹ ಲಕ್ಷ ಗಳಲ್ಲಿ)

1. ಮಾಕುಟ್ಟ ವಲಯ, ಮುರುಳಿ ಎಸ್ಟೇಟ್‌ನಿಂದ ನಂಬಿಯಾರ್ ಎಸ್ಟೇಟ್‌ವರೆಗೆ 0.820 ಕಿ.ಮೀ.	4.62
2. ಮಾಕುಟ್ಟ ವಲಯ, ನಂಬಿಯಾರ್ ಎಸ್ಟೇಟ್ ನಿಂದ ಪಟ್ಟು ಎಸ್ಟೇಟ್‌ವರೆಗೆ 0.297 ಕಿ.ಮೀ.	1.68
ಒಟ್ಟು:	**6.30**